2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 154/2019

| | | |
|---|---|---|
| ಸಾಕ್ಷಿದಾರರ ಹೆಸರು | - ವಿಜು ಎಂ.ಎ. | ಪಿಡಬ್ಲೂ - 07 |
| ತಂದೆಯ ಹೆಸರು | - ಅಗಸ್ಟಿನ್ ಕುಟ್ಟಿ | ಸಿಡಬ್ಲೂ - 13 |
| ವಯಸ್ಸು | - 52 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ವಿಟ್ಟಲ ಗ್ರಾಮ, ಮಾಕೋಡು, ಚಿಕ್ಕಮಗಳೂರು. | |

ದಿನಾಂಕಃ **25.04.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಗೊತ್ತು. ಅವರು ನಮ್ಮ ಚರ್ಚಿಗೆ ಪ್ರಾರ್ಥನೆ ಮಾಡಲು ಬರುತ್ತಾರೆ. ಚಾಸಾ.1 ರವರ ಪರಿಚಯ ನನಗಿಲ್ಲ. ಚಾಸಾ.14 ರವರ ಪರಿಚಯ ಇದೆ.

2. ಈಗ ತೋರಿಸಿದ ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇದ್ದು ಸದರಿ ಪಂಚನಾಮೆಯನ್ನು ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಭಾವಚಿತ್ರದಲ್ಲಿ ನಾನು ಇದ್ದು ಅದನ್ನು ನಿಪಿ.9 ಎಂದು ಗುರುತಿಸಲಾಯಿತು.

3. ನಿಪಿ.8 ಕ್ಕೆ ಜೂನ್ 2019 ರಲ್ಲಿ ನ.ರಾ.ಪುರ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ಒಂದು ಚೂಡಿದಾರ್ ಟಾಪ್ ನ್ನು ಆರೋಪಿತರು ತೋರಿಸಿದಂತೆ ಅಮಾನತು ಪಡಿಸಿಕೊಂಡರು. ಚಾಸಾ.14 ರವರು ಕೂಡ ನನ್ನ ಜೊತೆ ಮಹಜರಿಗೆ ಸಹಿ ಮಾಡಿದ್ದಾರೆ. 1 ನೇ ಆರೋಪಿ ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ಹಾಜರುಪಡಿಸಿದ್ದಾಗಿ ತಿಳಿಸಿದರು.

4. ಪೋಲೀಸರು ಅಮಾನತುಪಡಿಸಿಕೊಂಡ ಬಟ್ಟೆಯನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

ಮು.ಮಾ.2 ಕ್ಕೆ ಅಂಟಿಸಿದ ಚೀಟಿಯ ಮೇಲಿನ ಸಾಕ್ಷಿಯ ಸಹಿಯನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿಃ

5. ಆರೋಪಿತರು ಕೇರಳದ ಮೂಲ ನಿವಾಸಿಗಳು. ಆರೋಪಿತರಿಗೆ ಕನ್ನಡ ಭಾಷೆ ಸರಿಯಾಗಿ ಬರುವುದಿಲ್ಲ. ನಿಪಿ.8 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಪಂಚನಾಮೆ ಬರೆದ ಸ್ಥಳದ ಚತುರ್ಗಡಿ ಹೇಳಲಾಗುವುದಿಲ್ಲ. ಠಾಣೆಯ ಚತುರ್ಗಡಿ ಹೇಳಲಾಗುವುದಿಲ್ಲ.

6. ಮು.ಮಾ.2 ನ್ನು ಯಾರು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ನಿಪಿ.8 ರ ಪಂಚನಾಮೆ ಯಾರು ಬರೆದರು ಎಂದು ಗೊತ್ತಿಲ್ಲ. ಭಾವಚಿತ್ರ ಸಂಗ್ರಹಿಸಿದವರ ಹೆಸರು ಹೇಳಲಾಗು ವುದಿಲ್ಲ. ಚಾಸಾ.14 ನನ್ನ ಸ್ನೇಹಿತರು. ನಾನು ಆ ಸಮಯದಲ್ಲಿ ವಿಟ್ಟಲ ಗ್ರಾಮದ ಪಂಚಾಯತಿ ಸದಸ್ಯನಾಗಿದ್ದೇನೆ. ಪೋಲೀಸರು ನನಗೆ ನೋಟೀಸು ನೀಡಿ ಕರೆಸಿರಲಿಲ್ಲ.

7. ಠಾಣೆಗೆ ಹೋದಾಗ ನಿಪಿ.8 ದಾಖಲೆಗೆ ಸಹಿ ಮಾಡಿದ್ದು ಹೊರತುಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ